crl. mis 213-2023 ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **19.02.2025.**

ಪಾಟೀ ಸವಾಲು ಃ ಶ್ರೀ **KM P** ನ್ಯಾಯಾವಾದಿಗಳಿಂದ ಃ

ನಾನು ಯಾವುದೇ ಉದ್ಯೋಗದಲ್ಲಿ ಇಲ್ಲ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಮ್ಮ ಊರು ಗದ್ದೆಭುವನಹಳ್ಳಿಯ ಪುರಸಭೆಗೆ ಬರುತ್ತದೆ ಎಂದರೆ ಸರಿ. ನಾಗಮಂಗಲ ಪಟ್ಟಣದಿಂದ ನಮ್ಮ ಊರಿಗೆ 1 ಕಿ.ಮೀ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಕಿ.ಮೀ ಇರುವುದಾಗಿ ನುಡಿಯುತ್ತಾರೆ.

2. 2018 ರಿಂದ ನಾನು ಮತ್ತು ನನ್ನ ಗಂಡ ಪ್ರತ್ಯೇಕವಾಗಿ ವಾಸ ಇದ್ದೇವೆ. ಆಸ್ತಿ ಮತ್ತು ಹೊಣೆಗಾರಿಕೆಯ ಪ್ರಮಾಣ ಪತ್ರಿಕೆಯಲ್ಲಿ ದಿಃ 10.06.2016 ರಿಂದ ಗಂಡನಿಂದ ಪ್ರತ್ಯೇಕವಾಗಿ ವಾಸ ಇರುವುದಾಗಿ ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು 2018 ರಿಂದ ಪ್ರತ್ಯೇಕವಾಗಿ ಇರುವುದಾಗಿ ನುಡಿಯುತ್ತಾರೆ. 2018 ರಿಂದ ನಾನು ನನ್ನ ತವರು ಮನೆಯಲ್ಲಿ ವಾಸವಿದ್ದೇನೆ.

3. ಈ ಪ್ರಕರಣವನ್ನು ದಾಖಲಿಸುವ ಮುಂಚೆ ನನ್ನ ಗಂಡ ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮಂಡ್ಯದಲ್ಲಿ ಎಂ.ಸಿ ಸಂಖ್ಯೆ 97/2018 ರಂತೆ ವಿವಾಹ ವಿಚ್ಛೇಧನ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಿನಾಂಕ 02.11.2023 ರಂದು ಅರ್ಜಿಯು ಪುರಸ್ಕೃತಗೊಂಡು ವಿವಾಹ ವಿಚ್ಛೇಧನದ ಆದೇಶವನ್ನು ಹೊರಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು ವಿವಾಹ ವಿಚ್ಛೇಧನಕ್ಕೆ ಸಮ್ಮತಿ ನೀಡಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಸಾಕ್ಷ್ಯವನ್ನು ಕೊಟ್ಟಿದ್ದೆ ಎಂದರೆ ಸರಿ.

4. ಸದರಿ ಪ್ರಕರಣವು ಮುಕ್ತಾಯ ಆಗುವವರೆಗೂ ಸದರಿ ಪ್ರಕರಣದ ಮಧ್ಯಾಂತರ ಆದೇಶದಂತೆ ನನ್ನ ಮಗ ಪ್ರತಿ ತಿಂಗಳು 3,000/- ಜೀವನಾಂಶವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣದ ಆದೇಶದಂತೆ ನನ್ನ ಗಂಡ ಪ್ರತಿ ತಿಂಗಳು ಮಧ್ಯಾಂತರ ಜೀವನಾಂಶವನ್ನು ನೀಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ಪ್ರಕಾರ ಜೀವನಾಂಶವನ್ನು ನೀಡುತ್ತಿಲ್ಲ ಎಂದು ನಮ್ಮ ವಕೀಲರ ಮುಖಾಂತರ ಸದರಿ ಪ್ರಕರಣದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೆ. ಆ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ತಂದು ಹಾಜರು ಪಡಿಸುತ್ತೇನೆ.

5. ಎಂ.ಸಿ ಸಂಖ್ಯೆ 97/2018 ರಲ್ಲಿ ಮಧ್ಯಾಂತರ ಜೀವನಾಂಶವನ್ನು ಪಡೆದಿದ್ದರು ಸಹ ನನ್ನ ಆಸ್ತಿ ಮತ್ತು ಹೊಣೆಗಾರಿಕೆಯ ಪ್ರಮಾಣ ಪತ್ರದ ಕ್ರಮ ಸಂಖ್ಯೆ.14 ರಲ್ಲಿ ಯಾವುದೇ ಜೀವನಾಂಶವನ್ನು ಪಡೆದಿರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಗಂಡ ಆದೇಶದ ಪ್ರಕಾರ ಜೀವನಾಂಶವನ್ನು ಪಾವತಿ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಎಂ.ಸಿ 97/2018 ರಲ್ಲಿ ಮಧ್ಯಾಂತರ ಜೀವನಾಂಶದ ಆದೇಶವು ಆಗಿರುವ ಬಗ್ಗೆ ಮತ್ತು ಸದರಿ ಪ್ರಕರಣದಲ್ಲಿ ನನ್ನ ಗಂಡ ಪಾವತಿ ಮಾಡಿರುವ ಜೀವನಾಂಶ ಮತ್ತು ಪಾವತಿ ಮಾಡಬೇಕಾಗಿದ್ದ ಬಾಕಿ ಜೀವನಾಂಶದ ಬಗ್ಗೆ ನಾನು ಸಲ್ಲಿಸಿರುವ ನನ್ನ ಆಸ್ತಿ ಮತ್ತು ಹೊಣೆಗಾರಿಕೆಯ ಪ್ರಮಾಣ ಪತ್ರಿಕೆಯ ಕ್ರಮ ಸಂಖ್ಯೆ.14 ರಲ್ಲಿ ತಿಳಿಸಲು ನನಗೆ ಏನು ತೊಂದರೆ ಇರಲಿಲ್ಲ.

6. ಅದೇ ರೀತಿ ಎಂ.ಸಿ 97/2018 ರಲ್ಲಿ ಮಧ್ಯಾಂತರ ಜೀವನಾಂಶದ ಆದೇಶವು ಆಗಿರುವ ಬಗ್ಗೆ ಮತ್ತು ಸದರಿ ಪ್ರಕರಣದಲ್ಲಿ ನನ್ನ ಗಂಡ ಪಾವತಿ

ಮಾಡಿರುವ ಜೀವನಾಂಶ ಮತ್ತು ಪಾವತಿ ಮಾಡಬೇಕಾಗಿದ್ದ ಬಾಕಿ ಜೀವನಾಂಶದ ಬಗ್ಗೆ ಈ ಅರ್ಜಿಯಲ್ಲಿ ತಿಳಿಸಲು ನನಗೆ ಏನು ತೊಂದರೆ ಇರಲಿಲ್ಲ.

7. ನನ್ನ ತಾಯಿಗೆ ಒಟ್ಟು 4 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ನನ್ನ ತಂದೆಗೆ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ನನ್ನ ಜೊತೆ ಊರಿನಲ್ಲಿ ವಾಸ ಇದ್ದಾರೆ. ನನ್ನ ಅಣ್ಣ ಬೆಂಗಳೂರಿನಲ್ಲಿ ವಾಸ ಇದ್ದಾರೆ . ನನ್ನ ಊರಿನಲ್ಲಿ ನನ್ನ ತಂದೆಗೆ ಆಸ್ತಿಯು ಇದೇಯಾ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

8. ನನ್ನ ಮಗನ ವಿಧ್ಯಾಭ್ಯಾಸಕ್ಕೆ ಮತ್ತು ನನಗೆ ಮತ್ತು ನನ್ನ ತಾಯಿಗೆ ಬಿ.ಪಿ ಷುಗರ್ ಖಾಯಿಲೆ ಇದ್ದು ಪ್ರತಿ ತಿಂಗಳು 10,000/- ಜೀವನಾಂಶ ಅವಶ್ಯಕತೆ ಇರುತ್ತದೆ. ನನ್ನ ತಾಯಿಯನ್ನು ನೋಡಿಕೊಳ್ಳಲು ನನ್ನ ಸಹೋದರ ಇದ್ದಾರೆ, ಆದರೆ ನನ್ನ ತಾಯಿಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಹಾಗಾಗಿ ನನ್ನ ತಾಯಿ ನೋಡಿಕೊಳ್ಳಲು ನನಗೆ ಜೀವನಾಂಶ ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನಗೆ ಥೈರಾಡ್ ಮತ್ತು ಬಿ.ಪಿ ಇರುವ ಸಂಬಂದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಏನು ತೊಂದರೆ ಇಲ್ಲ. ಎ.ವಿ.ಎಸ್ .ಎಸ್ ನಾಗಮಂಗಲ ಶಾಖೆಯಲ್ಲಿ 20 ಸಾವಿರ ಸಾಲವನ್ನು ಪಡೆದುಕೊಂಡಿರುವ ಸಂಬಂಧ ದಾಖಲೆಗಳು ಇರುತ್ತವೆ . ಸಾಕ್ಷಿಯು ಸ್ವತಃ ತಾನು ಎ.ವಿ.ಎಸ್ .ಎಸ್ ನಾಗಮಂಗಲ ಶಾಖೆಯಲ್ಲಿ ಶೇರು ಹೊಲ್ಡರ್ ಆಗಿರುವುದಾಗಿ ನುಡಿಯುತ್ತಾರೆ. ನಾನು ಒಂದು ಶೇರ್ ಅನ್ನು ತೆಗೆದುಕೊಂಡಿರುತ್ತೇನೆ. ಒಂದು ಶೇರ್ ನ ಮೊತ್ತ 1,250/- ಆಗಿರುತ್ತದೆ. ನಾನು ಸದರಿ ಸಂಸ್ಥೆಯಲ್ಲಿ ಯಾವುದೇ ಕೆಲಸ

ಮಾಡುತ್ತಿಲ್ಲ. ನಾನು ಎ.ವಿ.ಎಸ್ .ಎಸ್ ನಾಗಮಂಗಲ ಶಾಖೆಯಲ್ಲಿಕೆಲಸ ಮಾಡುತ್ತಿದ್ದು ನನಗೆ ಪ್ರತಿ ತಿಂಗಳು 10,000 ಸಂಬಳ ಬರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಲವನ್ನು ತೆಗೆದುಕೊಂಡಿರುವುದಿಲ್ಲ ಎ.ವಿ.ಎಸ್ .ಎಸ್ ನಾಗಮಂಗಲ ಶಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಸಾಲವನ್ನು ಪಡೆದಿರುವುದಾಗಿ ಸೃಷ್ಟಿಸಿಕೊಂಡು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ಗಂಡ ದ್ವೀತಿಯ ಪಿ.ಯು.ಸಿ ವರೆಗೆ ಓದಿರುತ್ತಾರೆ. ನನ್ನ ಗಂಡ 9 ನೇ ತರಗತಿಯವರೆಗೆ ಮಾತ್ರ ಓದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮದುವೆ ಸಮಯದಲ್ಲಿ ದ್ವೀತಿಯ ಪಿ.ಯು.ಸಿಯವರಗೆ ಓದಿರುವುದಾಗಿ ನನಗೆ ಹೇಳಿದರು ಎಂದು ನುಡಿಯುತ್ತಾರೆ.

11. ನನ್ನ ಗಂಡನ ಜೊತೆ ಯಾರು ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಬೆಂಗಳೂರಿನಲ್ಲಿ ಫುಡ್ ಇಸ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದು, ಪ್ರತಿ ತಿಂಗಳು 30,000 ಸಾವಿರ ಸಂಬಳ ಬರುತ್ತದೆ. ಈ ಸಂಬಂಧ ದಾಖಲೆಯನ್ನು ಕೊಡಲು ನನಗೆ ಏನು ತೊಂದರೆ ಇಲ್ಲ. ನನ್ನ ಗಂಡ ಚಂದಗಾಲ ಗ್ರಾಮದಲ್ಲಿ ತನ್ನ ತಾಯಿಯ ಜೊತೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಖಾಯಿಲೆ ಇದ್ದು, ಅವರನ್ನು ನೋಡಿಕೊಳ್ಳಲು ನನ್ನ ಗಂಡನಿಗೆ ತುಂಬಾ ಖರ್ಚು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡನ ಕುಟುಂಬದವರು ಆರ್ಥಿಕವಾಗಿ ಚೆನ್ನಾಗಿ ಇರುವುದಾಗಿ ನುಡಿಯುತ್ತಾರೆ. ಆರ್ಥಿಕವಾಗಿ ಚೆನ್ನಾಗಿರುವ ಸಂಬಂಧ ದಾಖಲೆಗಳನ್ನು ಕೊಡಲು ನನಗೆ ಏನು ತೊಂದರೆ ಇಲ್ಲ. ನನ್ನ ಗಂಡನಿಗೆ ಯಾವುದೇ ಕೃಷಿ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

12. ನಮ್ಮ ಮದುವೆಯಾದ ಮೇಲೆ ನಾವು 3 ವರ್ಷಗಳ ತನಕ ಚೆನ್ನಾಗಿ ಇದ್ದೇವು. ನನ್ನನ್ನು ಚಂದಗಾಲದಲ್ಲಿ ತನ್ನ ತಂದೆ ತಾಯಿ ಬಳಿ ಬಿಟ್ಟು ನನ್ನ ಗಂಡ ಬೆಂಗಳೂರಿನಲ್ಲಿ ಇದ್ದರು. ನಾನು ಜಗಳ ಮಾಡಿಕೊಂಡು ಬೆಂಗಳೂರಿಗೆ ಹೋದೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ನನ್ನ ಗಂಡನ ವಿರುದ್ಧ ದೂರನ್ನು ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ನನ್ನ ಗಂಡ ಸರಿಯಾಗಿ ಊರಿಗೆ ಬರುತ್ತಿರಲಿಲ್ಲ ಎಂದು ದೂರನ್ನು ಕೊಟ್ಟಿರುವುದಾಗಿ ನುಡಿಯುತ್ತಾರೆ. ಈ ಎಲ್ಲಾ ಸಂಗತಿಗಳನ್ನು ನನ್ನ ಅರ್ಜಿಯಲ್ಲಿ ಹೇಳಲು ನನಗೆ ಏನು ತೊಂದರೆ ಇರಲಿಲ್ಲ. ನಾನು ನನ್ನ ಸ್ವ-ಇಚ್ಛೆಯಿಂದ ಜೀವನ ಮಾಡಬೇಕೆಂದು ನನ್ನ ಗಂಡನನ್ನು ಹೆದರಿಸಿಕೊಂಡು ಇದ್ದೆಮತ್ತು ಆ ಬಗ್ಗೆ ಪೋಲಿಸ್ ಠಾಣೆಯಲ್ಲಿ ಸುಳ್ಳು ದೂರನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನನ್ನ ಕಿರುಕುಳವನ್ನು ತಾಳಲಾರದೆ ನನ್ನ ಗಂಡ ವಿವಾಹ ವಿಚ್ಛೇಧನವನ್ನು ಪಡೆದಿರುತ್ತಾರೆ ಎಂದರ ಸರಿಯಲ್ಲ. ವಿವಾಹ ವಿಚ್ಛೇಧನ ಆದೇಶವು ಆಗಿದ್ದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಂ.ಸಿ ಪ್ರಕರಣದಲ್ಲಿ ಜೀವನಾಂಶದ ಬಗ್ಗೆ ಆದೇಶ ಆಗಿದ್ದರು ಸಹ ಹೇಗಾದರು ಮಾಡಿ ನನ್ನ ಗಂಡನನ್ನು ಕರೆಸಿಕೊಳ್ಳಬೇಕೆಂದು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುತ್ತಿದ್ದು ನನಗೆ ಪ್ರತಿ ತಿಂಗಳು 10,000 ಆದಾಯ ಬರುತ್ತಿದ್ದು ನಾನು ಆರ್ಥಿಕವಾಗಿ ಚೆನ್ನಾಗಿ ಇದ್ದೇನೆ ಎಂದರೆ ಸರಿಯಲ್ಲ.

13. ನಾನೇ ಉದ್ದೇಶ ಪೂರಕವಾಗಿ ಗಂಡನನ್ನು ಬಿಟ್ಟಿರುವುದರಿಂದ ನಾನು ಜೀವನಾಂಶವನ್ನು ಪಡೆದು ಅರ್ಹಳಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ, ಅವರಿಗೆ ಪ್ರತಿ ತಿಂಗಳು 30,000

ಸಂಬಳ ಬರುತ್ತಿಲ್ಲ, ನನ್ನ ಗಂಡ ಊರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೋರಿರುವಂತೆ ಜೀವನಾಂಶವನ್ನು ಕೊಡಲು ನನ್ನ ಗಂಡ ಶಕ್ತರಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಈಗಲು ನನ್ನ ಗಂಡನ ಜೊತೆ ಜೀವನ ಮಾಡಲು ಸಿದ್ದ ಇರುವುದಾಗಿ ನುಡಿಯುತ್ತಾರೆ. ನನಗೆ ಗಂಡ ಬೇಕು ಎಂದು ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯು ಏನು ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅರ್ಜಿ ಸಲ್ಲಿಸಲು ನಮ್ಮ ವಕೀಲರಿಗೆ ಹೇಳಿದ್ದೆ ಆದರೆ ನಮ್ಮ ವಕೀಲರು ಎದುರುದಾರರ ವಕೀಲರ ಜೊತೆ ಶರೀಕ್ ಆಗಿ ನನಗೆ ತಿಳಿಯದಂತೆ ಮತ್ತು ನನ್ನ ಒಪ್ಪಿಗೆ ಇಲ್ಲದೆ ವಿವಾಹ ವಿಚ್ಛೇದನದ ಆದೇಶವನ್ನು ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ.

14. ನನ್ನ ಆಸ್ತಿ ಮತ್ತು ಹೊಣೆಗಾರಿಕೆ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ